ಏನು ? ನಾನು ಬ. ದಿಲ್ಲವೆಂದು ಹೇಳಿದರೆ ತಾವು ಒಪ್ಪಿಕೊಳ್ಳಬೇಕು. ನಾನು ಏನನ್ನಾದರೂ ನೇರವಾಗಿ ಹೇಳುತ್ತೇನೆ. ಸುಳ್ಳು ಹೇಳುವುದಕ್ಕೆ ಹೋಗುವುದಿಲ್ಲ. ನಿಮ್ಮ ಮನಸ್ಸಿನಲ್ಲಿರತಕ್ಕಂಥ ಆಂತಕವನ್ನು ಪರಿಹಾರ ಮಾಡಲು ಪ್ರಯತ್ನ ಮಾಡುತ್ತೇನೆಂದು ಹೇಳುತ್ತೇನೆ.

ಶ್ರೀ ಸಿ. ಬೈರೇಗೌಡ — ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಒಂದು ಪ್ರಶ್ನೆಯನ್ನು ಎತ್ತಿದ್ದಾರೆ. ಅದೇನೆಂದರೆ ನಿನ್ನೆಯ ದಿವಸ ಸಾಯಂಕಾಲ ಇದು ತಮ್ಮ ಗಮನಕ್ಕೆ ಬಂತು ಎನ್ನುವ ಮಾತನ್ನು ಹೇಳಿದ್ದಾರೆ. ಅಂದರೆ ಅದರ ಜವಾಬ್ದಾರಿ ತಮ್ಮ ಮೇಲೆ ಬರುತ್ತದೆ. ನಿನ್ನೆ ಸಾಯಂಕಾಲ ಮಾನ್ಯ ಮಂತ್ರಿಗಳ ಗಮನಕ್ಕೆ ಆ ನೋಟೀಸ್ ಬಂದಿದ್ದರೆ ಅದನ್ನು ನಾನು ಪ್ರಶ್ನೆ ಮಾಡಲೇಬೇಕಾಗುತ್ತದೆ. ನಾನು ನೋಟೀಸ್ ಕೊಟ್ಟು ೪-೫ ದಿವಸಗಳಾಗಿದೆ ಇದುವರೆವಿಗೂ ಆ ನೋಟೀಸ್ ಎಲ್ಲಿತ್ತು? ನನಗೆ ಅದು ಗೊತ್ತಾಗಬೇಕು. ಈಗ ಯಾರ ಮೇಲೋ ಜವಾಬ್ದಾರಿ ಹಾಕಿ ಅವರು ತಪ್ಪಿಸಿಕೊಳ್ಳುತ್ತಿದ್ದಾರೆ. ಬೇರೆಯವರ ಮುಖಕ್ಕೆ ಮಸಿ ಬಳಿಯತಕ್ಕಂಥ ವ್ಯವಹಾರ ಮಾನ್ಯ ಮಂತ್ರಿಗಳು ಮಾಡುತ್ತಿದ್ದಾರೆ. ನಾನು ನೋಟೀಸ್ ಕೊಟ್ಟು ೪-೫ ದಿವಸಗಳಾಗಿದೆ. ನಿಮ್ಮ ಕಾರ್ಯಾಲಯದಿಂದ ಮಾನ್ಯ ಮಂತ್ರಿಯವರಿಗೆ ಯಾವಾಗ ಅದು ಹೋಯಿತು. ಅದನ್ನು ದಯವಾಡಿ ತಿಳಿಸಬೇಕು. ಮಾನ್ಯ ಮಂತ್ರಿಗಳು ಸುಳ್ಳು ಹೇಳುವುದಿಲ್ಲವೆಂದು ಸಹ ಹೇಳುತ್ತಿದ್ದಾರೆ. ಹಾಗಾದರೆ ಈ ಲೋಪಕ್ಕೆ ಯಾರು ಕಾರಣರು ? ಒಬ್ಬ ಮಾನ್ಯ ಸದಸ್ಯರ ಹಕ್ಕನ್ನು ಈ ರೀತಿ ಮೊಟಕುಗೊಳಿಸತಕ್ಕಂಥಾದ್ದಕ್ಕೆ ಯಾರು ಪ್ರಯತ್ನ ಮಾಡಿದರು, ಇದು ನನ್ನನ್ನೂ ಕಾಡಿಸುತ್ತಿರತಕ್ಕಂಥ ಪ್ರಶ್ನೆ. ಈ ಜವಾಬ್ದಾರಿಯನ್ನು ತಮ್ಮ ಮೇಲೆ ಹಾಕಿದ್ದಾರೆ. ತಾವು ನನಗೆ ಉತ್ತರ ಕೊಡಬೇಕು.

ಅಧ್ಯಕ್ಷರು — ನಮಗೆ ಯಾವಾಗ ಬಂತು ಎಂಬುದನ್ನು ಮತ್ತು ಯಾವಾಗ ಕಳುಹಿಸಿದ್ದಾರೆಂಬುದನ್ನು ವಿಚಾರಿಸಿ ತಮಗೆ ತಿಳಿಸುತ್ತೇನೆ. ಈಗ ಮಾನ್ಯ ಸದಸ್ಯರಾದ ಶ್ರೀ ಆರ್. ಎನ್. ನಾಯಕ್ ರವರ ಗಮನ ಸೆಳೆಯುವ ಸೂಚನೆಯನ್ನ ತೆಗೆದುಕೊಳ್ಳುತ್ತೇನೆ.

2) ಭಟ್ಕಳ-ಹೊನ್ನಾವರ ಪುರಸಭೆಯ ವ್ಯಾಪ್ತಿಯಲ್ಲಿ ಬರುವ ಹಳ್ಳಿಗಳಲ್ಲಿ ಕೆಲವರು ಅರಣ್ಯ ಹಾಗೂ ರೆವಿನ್ಯೂ ಭೂಮಿಯನ್ನು ಅತಿಕ್ರಮಿಸಿ ಮನೆಗಳನ್ನು ಕಟ್ಟಿರುವುದರ ಬಗ್ಗೆ

ಶ್ರೀ ಆರ್.ಎನ್. ನಾಯಕ್ (ಭಟ್ಕಳ). —ಮಾನ್ಯ ಅಧ್ಯಕ್ಷರೇ, ಭಟ್ಕಳ ಹೊನ್ನಾವರ ಪುರಸಭೆಯ ವ್ಯಾಪ್ತಿಯಲ್ಲಿ ಹಾಗೂ ಸುತ್ತಮುತ್ತಲಿರುವ ಹಳ್ಳಿಗಳಲ್ಲಿ ಕೆಲವರು ಅರಣ್ಯ ಹಾಗೂ ರೆವಿನ್ಯೂ ಭೂಮಿ ಅತಿಕ್ರಮಿಸಿ ಪರವಾನಿಗಿ ಪಡೆಯದೇ ಮನೆ ಕಟ್ಟಿ ತದನಂತರ ಅದೇ ಪುರಸಭೆ ಹಾಗೂ ಮಂಡಲ ಪಂಚಾಯತ್‌ಗಳ ಮೂಲಕ ವಿದ್ಯುತ್ ಸಂಪರ್ಕ ಪಡೆಯಲು ಪರವಾನಿಗೆ ನೀಡಿರುವುದಲ್ಲದೆ ಕರಾಕರಣೆ ಮಾಡಿ ದಾಖಲೆ ನಿರ್ಮಿಸುತ್ತಿರುವ ಬಗ್ಗೆ ಮಾನ್ಯ ಬಂದರು ಮೀನುಗಾರಿಕೆ ಹಾಗೂ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ಟಿ.ಎನ್. ನರಸಿಂಹಮೂರ್ತಿ (ಮಾನ್ಯ ಬಂದರು ಮತ್ತು ಮೀನುಗಾರಿಕೆ ಹಾಗೂ ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—ಮಾನ್ಯ ಅಧ್ಯಕ್ಷರೇ, ಭಟ್ಕಳ ಪುರಸಭೆ ವತಿಯಿಂದ ಅರಣ್ಯ ಇಲಾಖಾ ಮತ್ತು ರೆವಿನ್ಯೂ ಭೂಮಿಯಲ್ಲಿ ಮನೆ ಕಟ್ಟಿ ತದನಂತರ ವಿದ್ಯುಚ್ಛಕ್ತಿ ಸರಬರಾಜಿಗೆ ಆಕ್ಷೇಪಣಾ ರಹಿತ ಪತ್ರ ನೀಡಿರುವುದಿಲ್ಲ. ಹಾಗೂ ಕಟ್ಟಡಗಳಿಗೆ ಕರಾಕರಣೆ ಮಾಡಿದ್ದಿಲ್ಲ.

ಹೊನ್ನಾವರದಲ್ಲಿ ಸುಮಾರು ೧೫-೨೦ ವರ್ಷಗಳಿಂದ ರೆವಿನ್ಯೂ ಮತ್ತು ಅರಣ್ಯ ಇಲಾಖೆಯ ಜಮೀನುಗಳ ಮೇಲೆ ಅನಧಿಕೃತವಾಗಿ ಕಟ್ಟಡಗಳನ್ನು ಕಟ್ಟಿರುವುದು ನಿಜ. ಅವುಗಳ ವಿವರ ಈ ರೀತಿ ಇರುತ್ತದೆ.

	ಮನೆಗಳ ಸಂಖ್ಯೆ
೧) ಅರಣ್ಯ ಇಲಾಖೆ ಜಮೀನಿನಲ್ಲಿ	೧೧೦
೨) ರೆವಿನ್ಯೂ ಜಮೀನಿನಲ್ಲಿ	೨೯

ಈ ಮನೆಗಳಿಗೆ ಸಾರ್ವಜನಿಕ ಮಾನವೀಯತೆ ದೃಷ್ಟಿಯಿಂದ ರಸ್ತೆ ಮತ್ತು ನೀರಿನ ಸೌಕರ್ಯಗಳನ್ನು ಒದಗಿಸಿರುತ್ತೆ. ಆದರೆ ವಿದ್ಯುತ್ ಇಲಾಖೆಗೆ ಎನ್.ಓ.ಸಿ.ಗಳನ್ನು ಪುರಸ್ಕರಿಸಿರುವ ಪುರಸಭೆಗಳಿಂದ ನೀಡಿಲ್ಲ. ವಿದ್ಯುತ್‌ಮಂಡಲಿಯೆಂದರೇ ಸ್ವತಃ ಜವಾಬ್ದಾರಿಯಿಂದ ನೀಡಿರುತ್ತಾರೆ.

ಶ್ರೀ ಆರ್.ಎನ್. ನಾಯಕ್.—ಮಾನ್ಯ ಅಧ್ಯಕ್ಷರೇ, ಭಟ್ಕಳ ಹೊನ್ನಾವರ ಪುರಸಭೆ ಮತ್ತು ಸುತ್ತಮುತ್ತಲ ಹಳ್ಳಿಗಳಲ್ಲಿ ಅರಣ್ಯ ಇಲಾಖೆಯ ಮತ್ತು ರೆವಿನ್ಯೂ ಜಮೀನುಗಳು ಏನಾದರೂ ಇದ್ದರೆ

ಆ ಜಮೀನುಗಳಲ್ಲಿ ಮನೆ ಕಟ್ಟಿಕೊಳ್ಳುವುದಕ್ಕೆ ಅವಕಾಶ ಕೊಟ್ಟು, ಕರಾಕರಣೆ ಮಾಡಿದ್ದು ವಿದ್ಯುತ್‌ಗೆ ಪರವಾನಿಗೆ ಸಹ ಈಗ ನೀಡಿದ್ದಾರೆ. ಭಟ್ಕಳ ಹೊನ್ನಾವರ ಸುತ್ತಮುತ್ತ ಇರತಕ್ಕ ಜಾಗ ಉಳಿಸಿಕೊಳ್ಳುವುದಕ್ಕೆ ಆಗದ ರೀತಿಯಲ್ಲಿ ಅವ್ಯವಹಾರಗಳು ನಡೆದಿವೆ. ಅಲ್ಲಿನ ರೆವಿನ್ಯೂ ಇಲಾಖೆಯವರಿಗೆ ಸ್ಯಗ್ಲಿಂಗ್ ಗೂಡ್ ಆದ ಟೇಪ್ ರೇಕಾರ್ಡರ್ಸ್ ಇನ್ನಿತರೆ ವಸ್ತುಗಳನ್ನು ಕೊಟ್ಟು ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಬೆಂಗಳೂರಿನಲ್ಲಿಯೂ ಸಹ ಅಂತಹ ಮನೆಗಳು ಇಲ್ಲ. ಅಲ್ಲಿ ಅಂತಹ ದೊಡ್ಡ ದೊಡ್ಡ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಈ ರೀತಿ ಆದರೆ ಮುಂದಿನ ಗತಿ ಏನು ? ಹೊನ್ನಾವರ ಸುತ್ತ ಭಟ್ಕಳ ಸುತ್ತ ಮುತ್ತಲೂ ಮುಂದೆ ಸಾರ್ವಜನಿಕ ಕೆಲಸಕಾರ್ಯಗಳಿಗೆ ಮತ್ತು ಬಡಬಗ್ಗರಿಗೆ ಸೈಟ್ ಕೊಡಬೇಕೆಂದರೆ ಜಮೀನು ಇಲ್ಲದಂತಹ ಪರಿಸ್ಥಿತಿ ಉಂಟಾಗಿದೆ.

೧೨-೩೦ ಪಿ.ಎಂ.

ಆ ವ್ಯವಸ್ಥೆಗೆ ಸರ್ಕಾರ ಏನು ಮಾಡುತ್ತದೆ ? ಹೊನ್ನಾವರದಲ್ಲಿ ೧೧೦ ಮನೆಗಳನ್ನು ಕೊಟ್ಟಿದ್ದಾರೆಂದು ಹೇಳಿದ್ದಾರೆ. ಈ ೧೧೦ ಮನೆಗಳು ಹೊನ್ನಾವರದ ಡಿ.ಎಫ್.ಓ., ಅವರ ಕಛೇರಿಗೆ ಒಂದು ಕಿಲೋ ಮೀಟರ್ ದೂರದಲ್ಲಿ ಮಾತ್ರ ಇದೆ. ಮನೆ ಕಟ್ಟಿಕೊಳ್ಳುತ್ತಿದ್ದಾಗೆ ಡಿ.ಎಫ್.ಓ., ಅವರು ಏನು ಮಾಡುತ್ತಿದ್ದರು ? ರೇಂಜರ್ಸ್ ಏನು ಮಾಡುತ್ತಿದ್ದರು ? ಭಟ್ಕಳದ ಒಂದು ಕಿಲೋ ಮೀಟರ್ ಸುತ್ತಮುತ್ತ ಐದು ನೂರಕ್ಕಿಂತ ಹೆಚ್ಚು ಮನೆಗಳನ್ನು ಈ ರೀತಿ ಕಟ್ಟಿಕೊಂಡಿದ್ದಾರೆ. ಈ ರೀತಿ ಕಟ್ಟಿರುವ ಮನೆಗಳನ್ನು ರೆಗ್ಯುಲರೈಸ್ ಮಾಡುವುದಕ್ಕೂ ತಮ್ಮಲ್ಲಿ ಏನೂ ದಾರಿ ಇಲ್ಲ. ಅವರಿಗೆ ಕರೆಂಟ್ ಪೂರೈಕೆ ಮಾಡುತ್ತೀರಿ. ಪಂಪು ಸೆಟ್ಟುಗಳಿಗೆ ಕರೆಂಟ್ ಕೊಡಿ ಎಂದು ಅರ್ಜಿ ಹಾಕಿಕೊಂಡು ಮೂರು ವರ್ಷಗಳಾದರೂ ರೈತರುಗಳಿಗೆ ಕರೆಂಟ್ ಕೊಡುವುದಿಲ್ಲ. ರೈತರುಗಳಿಗೆ ಕರೆಂಟ್ ಏಕೆ ಕೊಡುವುದಿಲ್ಲವೆಂದು ಕೇಳಿದರೆ ಸೀನಿಯಾರಿಟಿ ಪಟ್ಟಿಯನ್ನು ತೋರಿಸುತ್ತೀರಿ. ಈ ರೀತಿ ಇರುವಾಗ ಅನಧಿಕೃತವಾಗಿ ಕಟಿರುವ ಮನೆಗಳಿಗೆ ಯಾವ ರೀತಿ ಕರೆಂಟ್ ಕೊಡುತ್ತೀರಿ ? ಅನಧಿಕೃತ ಮನೆಗಳಿಗೆ ಕರೆಂಟ್ ಕೊಡುವ ಅಧಿಕಾರ ಎಲ್ಲಿಂದ ಬಂತು ? ಅನಧಿಕೃತವಾಗಿ ಮನೆ ಕಟ್ಟಿಕೊಳ್ಳುವಾಗ ಮತ್ತು ಕರೆಂಟ್‌ನ್ನು ಕೊಡುವಾಗ ಡಿ.ಎಫ್.ಓ. ಅವರು ಮತ್ತು ತಹಶೀಲ್ದಾರ್ ಅವರು ಏನು ಮಾಡುತ್ತಿದ್ದರು ? ಈ ರೀತಿ ಅತಿಕ್ರಮಣ ಮಾಡುವವರನ್ನು ತಡೆಯುವುದಕ್ಕೆ ಪುರಸಭೆಗಳು ಮತ್ತು ಮಂಡಲ ಪಂಚಾಯಿತಿಗಳು ಏಕೆ ಪ್ರಯತ್ನ ಮಾಡಲಿಲ್ಲ ? ಈ ರೀತಿ ಫಾರೆಸ್ಟ್ ಮತ್ತು ರೆವಿನ್ಯೂ ಜಾಗಗಳನ್ನು ಅತಿಕ್ರಮಣ ಮಾಡಿಕೊಂಡಿರುವವರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಟಿ.ಎನ್. ನರಸಿಂಹಮೂರ್ತಿ.—ಮಾನ್ಯ ಸಭಾಧ್ಯಕ್ಷರೇ, ನನ್ನ ಇಲಾಖೆಗೆ ಸಂಬಂಧಪಟ್ಟಂತೆ ಕೇಳಿದರೆ ಹೇಳಬಹುದು. ಈಗ ಏನಿದ್ದರೂ ಅರಣ್ಯ ಇಲಾಖೆ ಮತ್ತು ಕಂದಾಯ ಇಲಾಖೆಯ ಸಚಿವರುಗಳು ಇವರು ಕೇಳುವ ಪ್ರಶ್ನೆಗೆ ಉತ್ತರ ಕೊಡಬೇಕಾಗುತ್ತದೆ.

ಶ್ರೀ ಆರ್. ಎನ್. ನಾಯಕ್.—ಹೊನ್ನಾವರ ಪುರಸಭೆಯವರು ಯಾವ ರೀತಿ ಅನಧಿಕೃತ ಮನೆಗಳಿಗೆ ಕರಾಕರಣೆ (ಅಸಸ್‌ಮೆಂಟ್) ಮಾಡಿದ್ದಾರೆ ಹಾಗೂ ನೋ ಅಬ್ಜೆಕ್ಷನ್ ಸರ್ಟಿಫಿಕೇಟ್ ಕೊಟ್ಟಿದ್ದಾರೆ ಎನ್ನುವ ಬಗ್ಗೆ ೧೦ ಕೇಸ್‌ಗಳಿಗೆ ಸಂಬಂಧಪಟ್ಟ ದಾಖಲೆಗಳನ್ನು ತಂದರೆ, ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳನ್ನು ಸಸ್ಪೆಂಡ್ ಮಾಡುತ್ತೀರಾ ?

ಶ್ರೀ ಟಿ.ಎನ್. ನರಸಿಂಹಮೂರ್ತಿ.—ತಾವು ಈ ವಿಚಾರವನ್ನು ನನ್ನ ಗಮನಕ್ಕೆ ತಂದಿದ್ದೀರಿ. ಇಪ್ಪರಲ್ಲೇ ನಾನು ಅಲ್ಲಿಗೆ ಬರುತ್ತೇನೆ. ಆದನ್ನೆಲ್ಲಾ ನೋಡಿ ಸರಿಪಡಿಸುತ್ತೇನೆ.

ಶ್ರೀ ಆರ್.ಎನ್. ನಾಯಕ್.—ಹೊನ್ನಾವರ ತಾಲ್ಲೂಕು ಮತ್ತು ಭಟ್ಕಳ ತಾಲ್ಲೂಕಿನಲ್ಲಿ ಯಾವ ರೀತಿ ಅನಧಿಕೃತ ಮನೆಗಳಿಗೆ ದಾಖಲೆಗಳನ್ನು ಸೃಷ್ಟಿ ಮಾಡಿದ್ದಾರೆ ಎನ್ನುವ ಬಗ್ಗೆ ನಾನು ತಮಗೆ ಮಾಹಿತಿ ಕೊಡುತ್ತೇನೆ. ಇದಕ್ಕೆ ಸಂಬಂಧಪಟ್ಟವರಾದ ತಹಶೀಲ್ದಾರ್ ಮತ್ತು ಪುರ ಸಭೆಯ ಅಧಿಕಾರಿಗಳನ್ನು ಸಸ್ಪೆಂಡ್ ಮಾಡುತ್ತೀರಾ ?

ಶ್ರೀ ಟಿ.ಎನ್. ನರಸಿಂಹಮೂರ್ತಿ.—ಮಾನ್ಯ ಅಧ್ಯಕ್ಷರೇ, ಅವರು ಮಾಹಿತಿಯನ್ನು ಕೊಡಲಿ. ಅದನ್ನು ಪರಿಶೀಲನೆ ಮಾಡುತ್ತೇನೆ. ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರ ಹಿಂದೇಟು ಹಾಕುವುದಿಲ್ಲವೆಂದು ನಾನು ಹೇಳುತ್ತೇನೆ.

ಸಭಾಧ್ಯಕ್ಷರು.—ಈಗ ನಿಯಮ ೩೩೪ರ ಮೇಲಿನ ವಿಷಯ ತೆಗೆದುಕೊಳ್ಳುತ್ತೇನೆ.